ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ

2499(366); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ಮಧುಗಿರಿ ವಿಧಾನ ಸಭಾ ಕ್ಷೇತ್ರ ವ್ಯಾಪಿಯಲ್ಲಿ ಈಗಾಗಲೇ ಪ್ರಾರಂಭಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳೆಷ್ಟು (ವಿವರ ನೀಡುವುದು);

ಆ) ಪ್ರಸ್ತುತ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ;

ಇ) ಹಾಗಿದ್ದಲ್ಲಿ, ಕಾಮಗಾರಿ ಯಾವ ಹಂತದಲ್ಲಿದೆ, ಪೂರ್ಣಗೊಂಡ ಮತ್ತು ಅಪೂರ್ಣಗೊಂಡ ಕಾಮಗಾರಿಗಳೆಷ್ಟು (ವಿವರ ನೀಡುವುದು)?

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮ ಪಂಚಾಯತ್ ರಾಜ್ಯ ಸಚಿವರು)

ಅ) ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ 2011–12ನೇ ಸಾಲಿನಲ್ಲಿ 8 ನೀರು ಶುದ್ಧೀಕರಣ ಘಟಕಗಳು, O&M ಯೋಜನೆಯಡಿ 6 ನೀರು ಶುದ್ಧೀಕರಣ ಘಟಕಗಳು, ಇತರೆ ಯೋಜನೆಯಡಿ 1 ನೀರು ಶುದ್ಧೀಕರಣ ಘಟಕ ಒಟ್ಟು 15 ನೀರು ಶುದ್ಧೀಕರಣ ಘಟಕಗಳು ಹಾಗೂ 2013–14ನೇ ಸಾಲಿನಲ್ಲಿ 21 ನೀರು ಶುದ್ಧೀಕರಣ ಘಟಕಗಳು ಅನುಮೋದನೆಯಾಗಿರುತ್ತವೆ. ಸದರಿ 36 ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾಚರಣೆಯಲ್ಲಿರುತ್ತವೆ.

ಆ) **ಮತ್ತು** ಇ) 2014–15ನೇ ಸಾಲಿನ ಅನುಮೋದನೆಯಾದ ಮೊದಲ ಹಂತದ 1000 ನೀರು ಶುದ್ಧೀಕರಣ ಘಟಕಗಳ ಪೈಕಿ ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಟ್ಟು 20 ನೀರು ಶುದ್ಧೀಕರಣ ಘಟಕಗಳು ಅನುಮೋದನೆಯಾಗಿರುತ್ತವೆ. ಸದರಿ ನೀರು ಶುದ್ಧೀಕರಣ ಘಟಕಗಳು ಅಳವಡಿಸಲು ಸರ್ಕಾರೇತರ ಮತ್ತು ಸಂಘ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ನಿರ್ಮಿಸಲು **ಪ್ರತಿ ಘಟಕಕ್ಕೆ ರೂ. 5.00** ಲಕ್ಷಗಳನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಘಟಕಗಳು

ಅಳವಡಿಸಲು ಸರ್ಕಾರೇತರ ಮತ್ತು ಸಂಘ ಸಂಸ್ಥೆಗಳನ್ನು ಗುರುತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಗುರುತಿಸಿದ ನಂತರ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ಅಂಗನವಾಡಿ ಕಾರ್ಯಕರ್ತರಿಗೆ ಗೌರವ ಧನ

2500(1467); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಲಿ ನೀಡುತ್ತಿರುವ ಗೌರವಧನವೆಷ್ಟು;

ಆ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳನ್ನು ಮಿಶನ್ ಮೋಡ್ ಖಾಸಗೀಕರಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);

ಇ) ಹಾಗಿದ್ದಲ್ಲಿ, ಸದರಿ ಹೆಸರಿನಲ್ಲಿ ಖಾಸಗೀಕರಣ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ?

ಶ್ರೀಮತಿ ಉಮಾಶ್ರೀ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಅಂಗನವಾಡಿ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರದಿಂದ ರೂ. 3000/– ಗೌರವಧನ ಹಾಗೂ ರಾಜ್ಯ ಸರ್ಕಾರದ ವತಿಯಿಂದ ರೂ. 3000/– ಗೌರವಧನ ಹೀಗೆ ಒಟ್ಟು ರೂ. 6000/– ನೀಡಲಾಗುತ್ತಿದೆ.

ಆ) ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣ ಮಾಡುವ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ.